18) ಶಿವಾನಂದ ನೀರು ಬಳಕೆದಾರರ ಸಹಕಾರ ಸಂಘ ಮೈಗೂರ
19) ಭುವನೇಶ್ವರಿ ನೀರು ಬಳಕೆದಾರರ ಸಹಕಾರ ಸಂಘ ಶಿರಗುಪ್ಪಿ
20) ಬಸವೇಶ್ವರ ನೀರು ಬಳಕೆದಾರರ ಸಹಕಾರ ಸಂಘ ಹಿಪ್ಪರಗಿ
21) ಮಹಾಲಕ್ಷ್ಮಿ ನೀರು ಬಳಕೆದಾರರ ಸಹಕಾರ ಸಂಘ ಹುನ್ನೂರ
22) ಮಹಾಲಕ್ಷ್ಮಿ ನೀರು ಬಳಕೆದಾರರ ಸಹಕಾರ ಸಂಘ ಕುಂಬಾರಹಳ್ಳಿ
23) ಮಹಾದೇವ ನೀರು ಬಳಕೆದಾರರ ಸಹಕಾರ ಸಂಘ ಕುಂಚನೂರ
24) ಘಟಪ್ರಭಾ ನೀರು ಬಳಕೆದಾರರ ಸಹಕಾರ ಸಂಘ ಮದರಖಂಡಿ
25) ಶ್ರೀ ದಿಗಂಬರೇಶ್ವರ ನೀರು ಬಳಕೆದಾರರ ಸಹಕಾರ ಸಂಘ ಮರೆಗುದ್ದಿ
26) ಶ್ರೀ ಕಾಡಸಿದ್ದೇಶ್ವರ ನೀರು ಬಳಕೆದಾರರ ಸಹಕಾರ ಸಂಘ ನಿಂಗನೂರ

536(874) ಶ್ರೀ ಶ್ರೀರಾಮರೆಡ್ಡಿ ಜಿ.ವಿ. (ಬಾಗೇಪಲ್ಲಿ) :– ಮಾನ್ಯ ವಸತಿ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ಪ್ರಸ್ತುತ ವರ್ಷ ರಾಜ್ಯದಲ್ಲಿನ ವಸತಿ ಹೀನರಿಗೆ ವಸತಿ ಸೌಕರ್ಯ ನಿರ್ಮಿಸಿಕೊಂಡಿರುವ ಪ್ರಸ್ತಾಪ ಸರ್ಕಾರದ ಮುಂದಿದೆಯೇ;

ಆ) ಇದ್ದಲ್ಲಿ, ಪ್ರಸ್ತುತ ವರ್ಷ ಎಷ್ಟು ಮನೆಗಳನ್ನು ನಿರ್ಮಿಸುವ ಗುರಿ ಹೊಂದಲಾಗಿದೆ;

ಇ) ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮವೇನು?

ಶ್ರೀ ಎನ್. ಚಲುವರಾಯಸ್ವಾಮಿ (ವಸತಿ ಸಚಿವರ ಪರವಾಗಿ):

ಅ) ಹೌದು.

ಆ) ಪ್ರಸ್ತುತ ವರ್ಷ: 2006–2007 ರಲ್ಲಿ ಗ್ರಾಮೀಣ ಆಶ್ರಯ ಯೋಜನೆಯಡಿ 2,00,000 ಮನೆಗಳು. ಗ್ರಾಮೀಣ ಅಂಬೇಡ್ಕರ್ ಯೋಜನೆಯಡಿ 20.000 ಮನೆಗಳು, ನಗರ ಆಶ್ರಯ ಯೋಜನೆಯಡಿ 30,000 ಮನೆಗಳು ಹಾಗೂ ಇಂದಿರಾ ಆವಾಸ್ ಯೋಜನೆಯಡಿ 50,000 ಮನೆಗಳು ಹೀಗೆ ಒಟ್ಟು ಮೂರು ಲಕ್ಷ ಮನೆಗಳನ್ನು ಪೂರ್ಣಗೊಳಿಸುವ ಗುರಿಯನ್ನು ಹೊಂದಲಾಗಿದೆ.

ಇ) ಸರ್ಕಾರದ ವತಿಯಿಂದ 2005–06ನೇ ಸಾಲಿನಲ್ಲಿ ಈ ಕೆಳಗಿನಂತೆ ಮನೆಗಳ ಗುರಿಯನ್ನು ನಿಗದಿಪಡಿಸಲಾಗಿರುತ್ತದೆ.

* **ಗ್ರಾಮೀಣ ಆಶ್ರಯ ಯೋಜನೆ** – ಪ್ರತಿ ಗ್ರಾಮ ಪಂಚಾಯತಿಗೆ 40 ಮನೆಗಳಂತೆ ಒಟ್ಟು 2,26,080 ಮನೆಗಳು
* **ಗ್ರಾಮೀಣ ಅಂಬೇಡ್ಕರ್ ಯೋಜನೆ** – 24,040 ಮನೆಗಳು
* **ನಗರ ಆಶ್ರಯ ಯೋಜನೆ** – 50,000 ಮನೆಗಳು

ಹಾಗೂ

2006–07ನೇ ಸಾಲಿನ ಇಂದಿರಾ ಆವಾಸ್ ಯೋಜನೆಯಡಿ– 53,299 ಮನೆಗಳ ಗುರಿಯನ್ನು ನೀಡಲಾಗಿರುತ್ತದೆ.

ಈ ಗುರಿಗಳಿಗೆ ಸಂಬಂಧಪಟ್ಟಂತೆ ಫಲಾನುಭವಿಗಳ ಆಯ್ಕೆ ಪ್ರಕ್ರಿಯೆಯು ಪ್ರಗತಿಯಲ್ಲಿದ್ದು, 2006–07ರಲ್ಲಿ ಒಟ್ಟು 3,00,000 ಮನೆಗಳನ್ನು ಪೂರ್ಣಗೊಳಿಸುವ ಗುರಿಯನ್ನು ಸರಕಾರವು ಹೊಂದಿದೆ. ಇದಕ್ಕಾಗಿ 2006–2007 ರಲ್ಲಿ ಸರ್ಕಾರವು ಈ ಕೆಳಗಿನಂತೆ ಹಣವನ್ನು ಆಯವ್ಯಯದಲ್ಲಿ ಒದಗಿಸಿದೆ:

ಆಶ್ರಯ ಮತ್ತು ಅಂಬೇಡ್ಕರ್ ಮನೆಗಳಿಗೆ : ರೂ. 20,000.78 ಲಕ್ಷ

ಆಶ್ರಯ ನಿವೇಶನಗಳ ರಚನೆಗಾಗಿ : ರೂ. 488.40 ಲಕ್ಷ

ಇಂದಿರಾ ಆವಾಸ್ ಯೋಜನೆಗೆ ರಾಜ್ಯದ ಪಾಲು : ರೂ. 2718.11 ಲಕ್ಷ

ಕೇಂದ್ರ ಸರ್ಕಾರವು ಇಂದಿರಾ ಆವಾಸ್ ಯೋಜನೆಯಡಿಯಲ್ಲಿ ತನ್ನ ಪಾಲಿನ ಅನುದಾನ ರೂ. 9993.64 ಲಕ್ಷ ಒದಗಿಸಿದೆ.

537(875) ಶ್ರೀ ಶ್ರೀರಾಮರೆಡ್ಡಿ ಜಿ.ವಿ. (ಬಾಗೇಪಲ್ಲಿ) :– ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ಬಾಗೇಪಲ್ಲಿ ವಿಧಾನ ಸಭಾ ಕ್ಷೇತ್ರದಲ್ಲಿ ಉರ್ದು ಪ್ರೌಢಶಾಲೆಯ ಕೊರತೆಯಿಂದಾಗಿ ಈ ಪ್ರದೇಶದ ಅಲ್ಪಸಂಖ್ಯಾತ ವಿದ್ಯಾರ್ಥಿ, ವಿದ್ಯಾರ್ಥಿನಿಯರಿಗೆ ತೊಂದರೆಯಾಗುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಪ್ರಸ್ತುತ ವರ್ಷ ನೂತನ ಉರ್ದು ಪ್ರೌಢಶಾಲೆಗಳನ್ನು ಪ್ರಾರಂಭಿಸುವ ಪ್ರಸ್ತಾಪ ಸರ್ಕಾರದ ಮುಂದಿದೆಯೇ;

ಇ) ಹಾಗಿದ್ದಲ್ಲಿ, ಸರ್ಕಾರ ಈ ಬಗ್ಗೆ ಕೈಗೊಂಡ ಕ್ರಮವೇನು?

ಶ್ರೀ ಬಿ.ಎಸ್. ಹೊರಟ್ಟಿ (ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು):

ಅ), ಆ) ಮತ್ತು ಇ) ಬಾಗೇಪಲ್ಲಿ ಪಟ್ಟಣಕ್ಕೆ ಸರ್ಕಾರಿ ಉರ್ದು ಪ್ರೌಢಶಾಲೆ ಮಂಜೂರಾತಿಗಾಗಿ ಪ್ರಸ್ತಾವನೆ ಬಂದಿರುತ್ತದೆ. 2006–07ನೇ ಸಾಲಿಗೆ ಹೊಸ ಸರ್ಕಾರಿ ಪ್ರೌಢಶಾಲೆಗಳು ಮಂಜೂರು ಮಾಡುವ ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿದೆ.

538(774) ಶ್ರೀಮತಿ ಸುನೀತ ವೀರಪ್ಪಗೌಡ ಜೆ. (ಬನ್ನೂರು) :– ಮಾನ್ಯ ಜಲ ಸಂಪನ್ಮೂಲ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ಬನ್ನೂರಿನಿಂದ ನಂಜಾಪುರಕ್ಕೆ ನಂಜಾಪುರ ಏತ ನೀರಾವರಿ ಕಾಮಗಾರಿ ಕೈಗೊಳ್ಳಲು ಯಾವಾಗ ಅನುಮೋದನೆ ನೀಡಲಾಯಿತು;

ಆ) ಈ ಕಾಮಗಾರಿಗೆ ನಿಗಧಿಯಾದ ಅನುದಾನವೆಷ್ಟು ಹಾಗೂ ಬಿಡುಗಡೆಯಾದ ಅನುದಾನವೆಷ್ಟು;

ಇ) ಟೆಂಡರ್ ಕರೆದಾಗ ಕಾಮಗಾರಿ ಪೂರ್ಣಗೊಳ್ಳಲು ನಿಗದಿಗೊಳಿಸಲಾದ ಅವಧಿಯೆಷ್ಟು;